ಸಾದಿಕ್‌ನ ಬಲದ ಭುಜದ ಮೇಲೆ ಕೈಯಿಟ್ಟು 'ಇದು ಖಂಡಿತಾ ಬೇಡ ಸಾದಿಕ್. ನಾನು ಜೀವಮಾನದಲ್ಲಿ ಯಾರಿಂದಲೂ ಉಚಿತವಾಗಿ ಏನನ್ನು ಪಡೆದವನಲ್ಲ. ಈಗ ನನ್ನ ಕೊನೆಯ ದಿನಗಳಲ್ಲಿ ನನ್ನನ್ನು ನೀನು ಪಾಪಕೂಪಕ್ಕೆ ದಯವಿಟ್ಟು ತಳ್ಳಬಾರದು' ಎಂದು ನಿಧಾನವಾಗಿ ಅವನ ಭುಜದಿಂದ ಕೈ ತೆಗೆದು ಎರಡೂ ಕೈ ಜೋಡಿಸಿ ಬಿನ್ನವಿಸಿಕೊಂಡರು.

ಸಾದಿಕ್ ಅವಾಕ್ಕಾದ. 'ಸರ್ ಇದರ ಬಿಲ್ ಮಾಡಿ ಆಗಿದೆ. ನಿಮ್ಮ ಹೆಸರನ್ನೂ ಅದರಲ್ಲಿ ನಮೂದಿಸಿದ್ದಾರೆ. ನೀವು ಈಗ 'ಬೇಡ' ಅಂದರೆ ಅದನ್ನು ವಾಪಾಸು ಮಾಡಲು ಆಗುವುದಿಲ್ಲ' ಎಂದವನೇ , 'ನಿಮಗೆ ಇದು ಅನಿವಾರ್ಯ ನೀವು 'ಬೇಡ' ಅನ್ನಬಾರದು' ಎನ್ನುತ್ತಾ ಫ್ರಿಡ್ಜನ್ನು ಟೆಂಪೋದಿಂದ ಕೆಳಗಿಳಿಸಲು ಕೂಲಿಯವರಿಗೆ ಮತ್ತೆ ಆದೇಶಿಸಿದ.

ದುಗ್ಗೋಜಿ ಮಾಸ್ತ್ರು ಅಂಗಳದಲ್ಲೇ ತಲೆ ಮೇಲೆ ಕೈ ಇಟ್ಟು ಕುಳಿತರು. 'ಇಂಥ ಅಗ್ನಿಪರೀಕ್ಷೆ ಯಾಕೆ ಮಾಡುತ್ತಿಯೋ ಸಾದಿಕ್' ಎಂದವರೇ, ನಿಧಾನವಾಗಿ ಎದ್ದು ನಿಂತು ತುಸು ಯೋಚಿಸಿ 'ಸೀತಾಪುರದ ನಮ್ಮ ಹೈಸ್ಕೂಲಿಗೆ ಫ್ರಿಡ್ಜ್ ನ ಅವಶ್ಯಕತೆ ಇಲ್ಲ. ಆದರೂ ನಮ್ಮಲ್ಲಿ ಇರುವುದಕ್ಕಿಂತ, ಅಲ್ಲಿದ್ದರೆ ಅದು ನನಗಿಂತ ಹೆಚ್ಚು ಉಪಯೋಗವಾಗುತ್ತದೆ' ಎಂದರು.

ಅಷ್ಟರಲ್ಲಿ ನೀಲಮ್ಮ ನಡುವೆ ಬಾಯಿ ಹಾಕಿ 'ಹೌದು ಸಾದಿಕ್ ನೀನು ಈ ಫ್ರಿಡ್ಜನ್ನು ಇಲ್ಲಿ ಇಟ್ಟರೆ ಇವರು ತೀರಾ ನೊಂದುಕೊಳ್ಳುತ್ತಾರೆ ಮತ್ತು ರಾತ್ರೆಯೂ ಈ ವಿಚಾರದಲ್ಲಿ ತಲೆಕೆಡಿಸಿ ನಿದ್ದೆ ಬಿಡುತ್ತಾರೆ' ಎಂದರು.

ಸಾದಿಕ್ ಅನಿವಾರ್ಯವಾಗಿ ಫ್ರಿಡ್ಜ್‌ನಲ್ಲಿ ಟೆಂಪೋದ ಮೇಲೆ ಇರಿಸಲು ಕೂಲಿಯಾಳುಗಳಿಗೆ ಹೇಳಿ, 'ನಮ್ಮ ಶಾಸ್ತ್ರದಲ್ಲಿ ಕಾಲಿಗೆ ಬಿದ್ದು ಆಶೀರ್ವಾದ ಬೇಡುವ ಕ್ರಮವಿಲ್ಲ ಸರ್. ನಾನು ನಿಮ್ಮ ಕಾಲಿಗೆ ಬಿದ್ದಿದ್ದೇನೆ ಎಂದುಕೊಂಡು ಆಶೀರ್ವದಿಸಿ' ಎಂದು ಎರಡೂ ಕೈ ಜೋಡಿಸಿದ.

ದುಗ್ಗೋಜಿ ಮಾಸ್ತ್ರು ಅವನನ್ನು ಬಿಗಿದಪ್ಪಿ 'ಪರಮದಯಾಳುವಾದ ಅಲ್ಲಾಹು ನಿನ್ನನ್ನು ಹರಸಲಿ' ಎಂದು ಆಶೀರ್ವದಿಸಿದರು.

ಎರಡು ದಿನಗಳ ಮೇಲೆ ಸೀತಾಪುರ ಕುಪ್ಪಣ್ಣಯ್ಯನವರ ಹೋಟೆಲಿನಲ್ಲಿ ಈ ವಿಷಯದ ಚರ್ಚೆ ನಡೆಯಿತು. ಒಬ್ಬೊಬ್ಬರು ಒಂದೊಂದು ಅಭಿಪ್ರಾಯ ವ್ಯಕ್ತಪಡಿಸಿದರು.

ತಕ್ಷಣ ಚಹಾವನ್ನು ತುಟಿಗೆ ಇಡುತ್ತಿದ್ದ ವೆಂಕಪ್ಪ ಮಾಸ್ತ್ರು 'ಗಾಂಧೀಜಿ ಸತ್ತಿಲ್ಲ ಕುಪ್ಪಣ್ಣಯ್ಯನವರೇ,' ಎಂದರು.

ಅದಕ್ಕೆ ಪ್ರತಿಯಾಗಿ ಬೆಟ್ಟು ಗೋವಿಂದಯ್ಯ 'ಅವರನ್ನು ದಿನಾ ಕೊಲ್ಲುತ್ತಿದ್ದೇವಲ್ಲ ನಾವು!' ಎಂದ. ಆಗ ಕಾಫಿ, ತಿಂಡಿ ಮುಗಿಸಿ ಕೈ ತೊಳೆದುಕೊಳ್ಳುತ್ತಿದ್ದ ಚಿರ್ತಿಲ್ಲ ತಿಮ್ಮಪ್ಪ 'ಗಾಂಧೀಜಿ ಇದ್ದಾರೋ ಇಲ್ಲವೋ ಅದು ಬೇರೆ ಮಾತು. ಆದರೆ ಗಾಂಧೀಜಿ ತತ್ತ್ವ ಇನ್ನೂ ಇದೆ



ಎಂಬಂತೆ ಇರುವ ದುಗ್ಗೋಜಿ ಮಾಸ್ತ್ರು, ಮಾಂಸ ತಿಂದೂ ಉದಾರಿ ಎಂದು ಪೋಸು ಕೊಡುವ ಸಾದಿಕ್‌ನಂಥವರು ಇರುವುದು ಬರೇ ನಾಟಕ' ಎಂದ.

ಆತನಕ ಸುಮ್ಮನೇ ಇದ್ದು ಇದನ್ನೆಲ್ಲ ಕೇಳಿಸಿಕೊಳ್ಳುತ್ತಿದ್ದ ಕುಪ್ಪಣ್ಣಯ್ಯ 'ಮುಚ್ಚೋ ಬಾಯಿ! ಮಾತು ಮಾತಿಗೆ ಧರ್ಮ ದೇವರನ್ನು ಯಾರೂ ಎಳೆದು ತರಬೇಡಿ. ಎಲ್ಲ ಮತ ಧರ್ಮಗಳಲ್ಲಿ ಇರುವವರು ಮನುಷ್ಯರೇ ಹೊರತು ಪ್ರಾಣಿಗಳಲ್ಲ. ಒಳ್ಳೆಯವರ ಹಾಗೇ ಕೆಟ್ಟವರೂ ಎಲ್ಲ ಕಡೆ ಇರುತ್ತಾರೆ!' ಎಂದರು.

ಯಾರೂ ತುಟಿ ಪಿಟಕ್ಕೆನ್ನಲಿಲ್ಲ. ●